O.S. No: 312/2016
D.W:1

ದಿನಾಂಕಃ 28-02-2024 ಸಾಕ್ಷಿಯನ್ನು ಈ ದಿನ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**1 ನೇ ಪ್ರತಿವಾದಿಯ ಮುಖ್ಯ ವಿಚಾರಣೆಃಶ್ರೀ.ಎಸ್.ಎನ್.ಎನ್. ಕೆ. ವಕೀಲರಿಂದಃ**

1 (ಸಿ)ನೇ ಪ್ರತಿವಾದಿಯು ತನ್ನ ಮುಖ್ಯ ವಿಚಾರಣೆಯ ಸಾಕ್ಷ್ಯದ ಹೇಳಿಕೆಯನ್ನು ಪ್ರಮಾಣ ಪತ್ರದ ಮುಖೇನ ಸಲ್ಲಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿ ಅವುಗಳಲ್ಲಿ ಇರುವ ಅಂಶಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸುತ್ತಾರೆ.

ದಿನಾಂಕ 08-12-2015 ರಂದು ನನ್ನ ತಂದೆ ಮೃತ 1 ನೇ ಪ್ರತಿವಾದಿ ನನಗೆ ಬರೆದು ಕೊಟ್ಟ ವೀಲುನಾವೆಯನ್ನು ಹಾಜರುಮಾಡುತ್ತಿದ್ದು ಅದನ್ನು ರುಜುವಾತಿಗೆ ಒಳಪಟ್ಟು ನಿ.ಡಿ.1 ಎಂದು ಗುರುತಿಸಲಾಯಿತು. ನನ್ನ ತಂದೆ ಮಾಡಿರುವ ಸಹಿಯನ್ನು ನಾನು ಗುರುತಿಸಿದ್ದು ಅದನ್ನು ನಿ.ಡಿ.1(ಎ) ಎಂದು ಗುರುತಿಸಲಾಯಿತು. ನಿ.ಡಿ.1 ರಲ್ಲಿ ಸಾಕ್ಷಿದಾರರಾಗಿ ಸಹಿ ಮಾಡಿರುವ ಸಾಕ್ಷಿದಾರರು ನನ್ನ ತಂದೆಯ ದೂರದ ಸಂಬಂಧಿಕರಾಗಿರುತ್ತಾರೆ. ಸದರಿ ಸಾಕ್ಷಿದಾರರ ಪೈಕಿ 1 ನೇ ಸಾಕ್ಷಿದಾರರು ಮೃತಪಟ್ಟಿರುತ್ತಾರೆ. 2 ನೇ ಸಾಕ್ಷಿದಾರರು ಜೀವಂತ ಇರುತ್ತಾರೆ.

ಮುಂದುವರಿದ ಮುಖ್ಯ ವಿಚಾರಣೆಗೆ ಪ್ರತಿವಾದಿಯ ಪರ ವಕೀಲರು ಕಾಲವಕಾಶ ಕೋರಿದ್ದರಿಂದ ಅನುಮತಿ ನೀಡಿ ಮುಂದೂಡಲಾಯಿತು.

ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ, ಹೇಳಿ, ಕೇಳಿ, ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ
ದರ್ಜೆ ನ್ಯಾಯಿಕ ದಂಡಾಧಿಕಾರಿ, ಪುತ್ತೂರು, ದ.ಕ.